ಸಾಕ್ಷಿಯನ್ನು ವಿಧಿಬದ್ಧವಾಗಿ ಪ್ರಮಾಣೀಕರಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿಯರ ಪರವಾಗಿ ಶ್ರೀ ಎನ್ ಎಸ್ ಟಿ ವಕೀಲರಿಂದ ಃ-

ನಾನು ಅವಿದ್ಯಾವಂತೆ. ನನ್ನ ತಂದೆಗೆ ಇಬ್ಬರು ಪತ್ನಿಯರು. ನಾನು ಎರಡನೇ ಹೆಂಡತಿ ಮಗಳು. ನನ್ನ ತಾಯಿಗೆ ನಾಲ್ಕು ಜನ ಮಕ್ಕಳು. ಅವರಲ್ಲಿ ಮೂರು ಹೆಣ್ಣು ಮತ್ತು ಒಂದು ಗಂಡು. ನನ್ನ ಮದುವೆ 1988 ರಲ್ಲಿ ಆಗಿರುತ್ತದೆ. ಪ್ರತಿವಾದಿಯರು ನನ್ನ ವಿವಾಹವನ್ನು ಖರ್ಚು ಮಾಡಿ ನೆರವೇರಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡನ ಊರು ಗೋಣಿಸೋಮನಹಳ್ಳಿ. ನಾನು ಮದುವೆ ಆದ ದಿನಾಂಕದಿಂದ ಗಂಡನ ಮನೆಯಲ್ಲಿ ವಾಸವಿದ್ದೇನೆ ಎಂದರೆ ಸಾಕ್ಷಿಯು 1993 ರಿಂದ ನನ್ನ ತಂದೆ-ತಾಯಿಯ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ. ನಾನು ನನ್ನ ಗಂಡನ ಮನೆಯಲ್ಲಿ ವಾಸವಿದ್ದು , ಅವರಿಗೆ ಸೇರಿದ ಆಸ್ತಿಗಳನ್ನು ನೋಡಿಕೊಂಡು ಜೀವನ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗಂಡನ ಮನೆಯಲ್ಲಿ ಇದ್ದರೂ ಸಹ ಇಲ್ಲ ಎಂದು ಹೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಜಮೀನು ಇದೆ. ಆದರೆ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. 2 ಮತ್ತು 3 ನೇ ವಾದಿಗಳು ಮದುವೆ ಆಗಿ ಅವರ ಗಂಡನ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. ನನ್ನ ತಂದೆಗೆ ಇದ್ದ ಆಸ್ತಿಗಳು ಯಗಚಿ ಜಲಾಶಯಕ್ಕೆ ಮುಳುಗಡೆ ಆಗಿದ್ದು , ಅದರಿಂದ ಬಂದ ಪರಿಹಾರದ ಹಣವನ್ನು ನಾನು ಮತ್ತು ನನ್ನ ಸಹೋದರ ಹಾಗೂ ಸಹೋದರಿಯರು ಹಂಚಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮುಳುಗಡೆ ಬಾಬ್ತು ಬಂದ ಪರಿಹಾರಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಮತ್ತು ವಾದ ಪತ್ರದ ಪ್ಯಾರಾ - 4 ರಲ್ಲಿ ಹೇಳಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮುಳುಗಡೆ ಬಾಬ್ತು ಬಂದ ಪರಿಹಾರದ ಹಣವನ್ನು ದಾವಾ ಆಸ್ತಿಗಳ ಅಭಿವೃದ್ಧಿಗಾಗಿ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ದಾವಾ ಆಸ್ತಿಗಳನ್ನು ಅಭಿವೃದ್ಧಿಪಡಿಸುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಪರಿಹಾರದ ಹಣವನ್ನು ದಾವಾ ಆಸ್ತಿಗಳ ಅಭಿವೃದ್ಧಿಗೆ ಖರ್ಚು ಮಾಡಿದ ಬಗ್ಗೆ ಯಾವುದೇ ದಾಖಲೆ ಇಲ್ಲ. ದಾವಾ ಆಸ್ತಿಗಳು ಮೂಲತಃ ತಿಮ್ಮೇಗೌಡರವರಿಗೆ ಸೇರಿದ್ದು , ಅವರ ಮರಣದ ನಂತರ 1 ನೇ ಪ್ರತಿವಾದಿ ಗೌರಮ್ಮ ಮತ್ತು ಅವರ ಅಕ್ಕ ನಂಜಮ್ಮ ರವರಿಗೆ ವಾರಸು ಮೂಲಕ ಬಂದು ಜಂಟಿ ಖಾತೆ ಆಗಿರುತ್ತದೆ ಎಂದರೆ ಸರಿ. ಅನಂತರ ಅವರಿಬ್ಬರು ವಿಭಾಗ ಮಾಡಿಕೊಂಡು ಅವರ ಅವರ ಹೆಸರಿಗೆ ಖಾತೆ ಇದೆ ಎಂದರೆ ಸರಿ. ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ಸ್ತ್ರೀಧನ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಆಸ್ತಿಗಳ ಮೇಲೆ 1 ನೇ ಪ್ರತಿವಾದಿ ಸಂಪೂರ್ಣ ಹಕ್ಕು ಮತ್ತು ಹಿತಾಸಕ್ತಿ ಹೊಂದಿರುತ್ತಾರೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಗೆ ದಾವಾ ಆಸ್ತಿಗಳ ಮೇಲೆ ಇರುವ ಹಕ್ಕನ್ನು ಹೊರತುಪಡಿಸಿ ಇತರೆ ಯಾರಿಗೂ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳಿಗೂ ಮತ್ತು 2 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿಗಳಿಗೂ ಯಾವುದೇ ರೀತಿಯ ಸಂಬಂಧವಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಮೇಲೆ ನನಗೆ ಯಾವುದೇ ಹಕ್ಕು ಅಥವಾ ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರನ್ನು 3 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ 1 ಮತ್ತು 2 ನೇ ಪ್ರತಿವಾದಿಯರನ್ನು ನೋಡಿಕೊಳ್ಳುತ್ತಿರುವುದರಿಂದ 4 ನೇ ಪ್ರತಿವಾದಿಯ ಮೇಲೆ ಪ್ರೀತಿ ವಿಶ್ವಾಸ ಇದ್ದು , ಎಲ್ಲಾ ದಾವಾ ಆಸ್ತಿಗಳನ್ನು ಅವರ ಹೆಸರಿಗೆ ದಾನ ಪತ್ರದ ಮೂಲಕ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 3 ಮತ್ತು 4 ನೇ ಪ್ರತಿವಾದಿಯರು ದಾನಪತ್ರವನ್ನು ಸೃಷ್ಟಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಅನುಸೂಚಿ ಆಸ್ತಿಗಳಲ್ಲಿ ನನಗೆ ಹಿಸ್ಸೆ ಕೊಡುತ್ತೇವೆ ಎಂದು ಯಾವಾಗಲೂ ಹೇಳಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಅಲ್ಲದ ಕಾರಣ ಸದರಿ ಆಸ್ತಿಗಳ ಮೇಲೆ ನನಗೆ ಯಾವುದೇ ಹಕ್ಕು ಅಥವಾ ಹಿತಾಸಕ್ತಿ ಅಥವಾ ಹಿಸ್ಸೆ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನ್ನ ಸ್ವಇಚ್ಛೆಯಿಂದ 4 ನೇ ಪ್ರತಿವಾದಿ ಹೆಸರಿಗೆ ದಾವಾ ಆಸ್ತಿಗಳನ್ನು ದಾನಪತ್ರದ ಮೂಲಕ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃಇಲ್ಲ

ಓ ಹೇ ಕೇ ಸ ಇ ಒ

ಸಿವಿಲ್ ಜಡ್ಜ್-ಬೇಲೂರು

**OS 241.13**
**Case Called.**
**PW.1 present.**
**Fully cross examined.**
**No further evidence.**
**For Defendant Evidence by 19.02.2020.**

**Civil Judge: Belur**